364

ತಾರೀಖು 29ನೆ ಆಗಸ್ಟು 1904.

ನಂ. ರೆ. 1743—ಲ್ಯಾ. ರೆ. 44-99—14, ಸಿಡ್ಲಘಟ್ಟ ತಾಲ್ಲೂಕಿನ ಅಮಲ್ದಾರ್‌ರಾದ ಮೆ॥ ಕೆ. ಆರ್. ಸುಬ್ಬರಾಯುರಿಗೆ 1904ನೆ ಮಾರ್ಚ್ 30ನೆ ಮಕ್ತುಂ ರೆ. 2958—ರೆ. ಫೈ. 44-99ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟಿದ್ದ 2 ತಿಂಗಳ ಪ್ರಿವಿಲೇಜ್ ರಜಾವನ್ನು ಅವರು 1904ನೆ ಫೆಬ್ರವರಿ 10ನೆ ತಾರೀಖಿನಲ್ಲಿ ಉಪಯೋಗಿಸಿಕೊಂಡು 1904ನೆ ಮಾರ್ಚ್ 23ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರೆಂಬಿಗಿ ಉಪಯೋಗಿಸಿಕೊಳ್ಳದ ರಜಾ ಭಾಗದೊಂದಿಗೆ, ಉಪಯೋಗಿಸಿಕೊಂಡ ಪ್ರಿವಿಲೇಜ್ ರಜಾದಲ್ಲಿ ಪಜಾ ಮಾಡತಕ್ಕ ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 125ನೆ ಆರ್ಟಿಕಲ್ ಅನುಸರಿಸಿ ಕೆಲಸಕ್ಕೆ ದಾಖಲಾಗುವ ಉದ್ದಿಶ್ಯ ಕೊಡತಕ್ಕ 10 ದಿನಗಳು ಸಹ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 30ನೆ ಆಗಸ್ಟು 1904.

ನಂ. ರೆ. 1808—ಲ್ಯಾ. ರೆ. 125—04-2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 18ನೆ ಆರ್ಟಿಕಲ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕಿನ ಅಮಲ್ದಾರ್‌ರಾದ ಮೆ॥ ಸಿ. ಕೃಷ್ಣಮನಾಯುಡು ಯವರಿಗೆ 1904ನೆ ಆಗಸ್ಟು 10ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರ್ಭ್ಯ 19 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಬೆಂಗಳೂರು ತಾಲ್ಲೂಕಿಗೆ ಸೇರಿದ ರವಿನ್ಯೂ ಪ್ರೊಬೇಷನರಾದ ಮೆ॥ ಸಿ. ರಂಗನಾಥರಾವ್ ಸಾಹೆಬ್, ಬಿ. ಎ., ಬಿ. ಎಲ್., ಯವರು ಮೆ॥ ಸಿ. ಕೃಷ್ಣಮನಾಯುಡು ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕಾನಕಾನಹಳ್ಳಿ ತಾಲ್ಲೂಕಿನ ಅಮಲ್ದಾರ್ ವ ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಪ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 31ನೆ ಆಗಸ್ಟು 1904.

ನಂ ರೆ. 1819 —ಲ್ಯಾ. ರೆ. 25—1900—46, ಸ್ರ 1903ನೆ ಡಿಸೆಂಬರ್ 18ನೆ ಮಕ್ತುಂ ರೆ. 1744ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಆಗ ಸ್ಪೆಷಿಯಲ್ ಸಬ್ ಡಿವೀರ್ಜ್ ಆಫಿಸರಾದ ಮೆ॥ ಎಂ. ಕಾಂತರಾಜೆ ಅರಸಿನವರಿಗೆ ಕೊಟ್ಟಿದ್ದ 1 ತಿಂಗಳು 11 ದಿನಗಳ ಪ್ರಿವಿಲೇಜ್ ರಜಾದೊಂದಿಗೆ 1 ದಿವಸದ ಪ್ರಿವಿಲೇಜ್ ರಜಾ ಮತ್ತು ತಲಬಿಲ್ಲದ 2 ತಿಂಗಳ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬವೋಜೇಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 29ನೆ ಆಗಸ್ಟು 1904.

ನಂ. 805—ಮು. ಫೈ. ನಂ. 23-03, ಸ್ರ 1903ನೆ ಸೆಪ್ಟಂಬರ್ 10ನೆ ಮಕ್ತುಂ 673ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮೊಕರರ್ರಾಡಲ್ಪಟ್ಟ ಮತ್ತು ಈಚೆಗೆ ವ್ಯಾತಪಟ್ಟ ಎಲೆ ಮರಿಸಿದ್ದಪ್ಪ ಸೆಟ್ಟರಿಗೆ ಬದಲಾಗಿ ಮೆ॥ ರಾ॥ ರಾ॥ ಎಲೆ ಸಿದ್ದಲಿಂಗಪ್ಪಸೆಟ್ಟರು ಬೆಂಗಳೂರ ಪೇಟೆ ಮಲ್ಲೇಶ್ವರ ಬಡಾವಣೆಯಲ್ಲಿರುವ ಶ್ರೀ ಮಲ್ಲೇಶ್ವರ ಸ್ವಾಮಿಯ ದೇವಸ್ಥಾನದ ಧರ್ಮದರ್ಶಿಯರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಹುಕುಂ ಬವೋಜೇಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರಿಟರಿ.